

ಸುಮಾರು 60 ಅಡಿವರೆಗೆ ಅಡ್ಡ ಕೊಂಬೆ ಇಲ್ಲದಂತೆ ಮಲೆನಾಡಿನಲ್ಲಿ 120 ಅಡಿಗೂ ಮಿಕ್ಕಿ ನೇರವಾಗಿ ಬೆಳೆಯುವ ಮರ, ಮೇಲೆ ಏನಿದೆ ಅಂತ ಗೊತ್ತಾಗಲು ಸಾಧ್ಯವಿಲ್ಲದಂತೆ ಛತ್ರಿಯಂತೆ ಹರಡಿ, ನಿತ್ಯಹರಿದ್ವರ್ಣದ ದಟ್ಟತೆ ಹೊಂದಿರುತ್ತದೆ. ಹಾಗಾಗಿಯೇ ಕಣ್ಣಿಗೆ ಕಾಣದಷ್ಟು ಎತ್ತರದಲ್ಲಿ ಮಾಯಾಲೋಕವೇ ಇರಬಹುದು ಎನಿಸುವುದು. ಹಿಂದೆ ಹೇಳಿದ ದಾಲ್ಚಿನ್ನಿ ಮರ ಕೂಡ ದಟ್ಟ ಹಂದರ ಹೊಂದಿ ಸುಂದರವಾಗಿದ್ದರೂ, ಎತ್ತರದಲ್ಲಿ ಅಜಗಜಾಂತರ. ಅದರಲ್ಲೂ ಅತಿ ಎತ್ತರದಲ್ಲಿ ವಿಶಾಲ ಛತ್ರಿಯಂತೆ ಹಂದರ ಹೊಂದಿರುವುದು ಮದ್ದಾಲೆಯ ವಿಶಿಷ್ಟತೆ. ಇದಕ್ಕೆ ಸಾಮಾನ್ಯ ಏಳು ಎಲೆಗಳು ಕೂಡಿದಂತೆ ಇರುವುದರಿಂದ 'ಸಪ್ತಪರ್ಣಿ' ಎಂಬ ಹೆಸರೂ ಇದೆ. ಆದರೆ ಆರು, ಎಂಟು ಎಲೆಗಳು ಕೂಡಿರುವುದೂ ಇದೆ. ಎಲೆ ಹಿಂಭಾಗ ಬೆಳ್ಳಗಿರುತ್ತದೆ. ಎಲೆ, ತೊಗಟೆ ಕಿತ್ತರೆ ಹಾಲಿನಂಥ ದ್ರವ ಒಸರುತ್ತದೆ. ಈ ಗುಣಲಕ್ಷಣಗಳಿಂದ ಮದ್ದಾಲೆಯನ್ನು ಸುಲಭವಾಗಿ ಗುರುತಿಸಬಹುದು.

ಇದರ ವೈಜ್ಞಾನಿಕ ಹೆಸರು **Alstonia Scholaris.** ಹಿಂದೆ ರವೀಂದ್ರನಾಥ ಟ್ಯಾಗೋರರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವಾಗ ಈ ಎಲೆಯ ಗೊಂಚಲನ್ನು ಸಾಂಕೇತಿಕವಾಗಿ ಕುಲಪತಿಗಳು ನೀಡುವ ಸಂಪ್ರದಾಯ ಹುಟ್ಟುಹಾಕಿದ್ದರಂತೆ. ಅದಕ್ಕಾಗಿ **Scholaris** ಎಂದು ವೈಜ್ಞಾನಿಕ ಹೆಸರಿನಲ್ಲಿದೆ. ಈಗ ಆ ಸಂಪ್ರದಾಯ ಇಲ್ಲ. ಮರದ ಹಂದರದ ನಿಗೂಢತೆಯ ಕಾರಣವೇ ಇರಬಹುದು ಇಂಗ್ಲಿಷ್‌ನಲ್ಲಿ **Devil's tree,** ಅಂದರೆ 'ದೆವ್ವದ ಮರ' ಎನ್ನುತ್ತಾರೆ. ಇದು ಭಾರತದಾದ್ಯಂತ ಬೆಳೆಯುತ್ತದೆ. ಮರದಲ್ಲಿ ವಿಷ ಇದ್ದು, ಮಳೆಗಾಲದಲ್ಲಿ ವಿಷಾಂಶ ಕಡಿಮೆ ಇದ್ದಾಗ ತೊಗಟೆ ಕಿತ್ತು ಔಷಧಿಯಾಗಿ ಬಳಸಲಾಗುತ್ತದೆ. ಮದ್ದು ಎಂದರೆ ಔಷಧಿ ಎಂದರ್ಥ. ಅದಕ್ಕೆ ಹೆಸರು ಮದ್ದಾಲೆ.



ಮದ್ದಾಲೆ ಗಿಡ

ಅಡುಗೆಮನೆ ಪರಿಕರ, ಪೆನ್ಸಿಲ್, ಪ್ಯಾಕಿಂಗ್ ಡಬ್ಬವಾಗಿ ಬಳಕೆಯಾಗುತ್ತದೆ. ಮಿದುವಾದ ಮರವಾದ್ದರಿಂದ ನಾಟಾಕ್ಕೆ, ಕೃಷಿ ಸಲಕರಣೆಗೆ ಬಳಕೆಯಾಗುವುದಿಲ್ಲ. ಅಷ್ಟು ಎತ್ತರದ ಮರ ಉರುವಲಿಗೆ ಕಡಿಯುವ ಸಾಧ್ಯತೆಯೂ ಕಡಿಮೆ. ಬಹುತೇಕ ಭೂಕಬಳಿಕೆ ಕಾರಣದಿಂದ ವಿರಳವಾಗಿದೆ. ಮಲೆನಾಡಿನ ಕಡೆ ಮದ್ದಾಲೆ ವಿರಳವಾಗಿದ್ದರೂ ಆಲಂಕಾರಿಕವಾಗಿರುವುದರಿಂದ ಬೆಂಗಳೂರಿನ ಗೇಟೆಡ್ ಸಮುದಾಯ ಹಾಗೂ ಖಾಸಗಿ ಜಾಗದಲ್ಲಿ ಈ ಮರಗಳನ್ನು ರಸ್ತೆ ಬದಿ ಸುಮಾರು ಬೆಳೆಸಿದ್ದಾರೆ.

ನಮ್ಮ ತಂದೆಯವರು ಬೆಳೆಸಿದ ಖಾಸಗಿ ಕಾಡಿನಲ್ಲಿ ಇರುವ ಮದ್ದಾಲೆ 100 ಅಡಿಗೂ ಮಿಕ್ಕಿ ಬೆಳೆದಿದ್ದರೂ ಒಂದು ಸಸಿಯೂ ಅದರ ಕೆಳಗೆ ಹುಟ್ಟುತ್ತಿಲ್ಲ. ಸಾಮಾನ್ಯವಾಗಿ ಹಾಲು ಒಸರುವ ಗುಣಲಕ್ಷಣದ ಮರವಾದ್ದರಿಂದ ಒಂದು ಸಣ್ಣ ಕೊಂಬೆ ನೆಟ್ಟೂ, ಚಿಗುರಿಸಲು ಸಾಧ್ಯ. ನಮ್ಮ ತೋಟದಲ್ಲಿ ಎರಡು ವರ್ಷಗಳ ಹಿಂದೆ ಹಾಕಿದ ಮದ್ದಾಲೆ ಸಸಿಗಳು ಆಗಲೇ ಆಳೆತ್ತರ ಮೀರಿ ಬೆಳೆದು ಕಲ್ಪನೆಯ ಕಥೆಗೆ ಪುಷ್ಟಿ ಕೊಡುವಂತೆ ವೇಗದ ಬೆಳವಣಿಗೆಯನ್ನು ನಿರೂಪಿಸಿವೆ. ಕಾಡಿನಲ್ಲಿರುವ ಮದ್ದಾಲೆಯನ್ನು ಕ್ಯಾಮೆರಾ ಚೌಕಟ್ಟಿನಲ್ಲಿ ತರಲು ಸಾಧ್ಯವಾಗದೇ ಹೋದರೂ, ತೋಟದಲ್ಲಿರುವ ಮದ್ದಾಲೆ ಗಿಡದ ಬೆಳೆಯುವ ಸಿರಿಯನ್ನು ಚಿತ್ರದಲ್ಲಿ ಕಾಣಬಹುದು.

ರಾಜಕುಮಾರ್ ಮರುಸೃಷ್ಟಿ ಸಾಧ್ಯವಿಲ್ಲವಾದರೂ ಮರಗಳ ಮಹಾರಾಜನಂತಿರುವ ಮದ್ದಾಲೆಯ ಮರುಸೃಷ್ಟಿ ಮಾಡಲು ಪ್ರಯತ್ನಿಸೋಣ.

ಪ್ರತಿಕ್ರಿಯಿಸಿ: **feedback@sudha.co.in**

